ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ.

**ಅಪರಾಧ ಸಂಖ್ಯೆ 1605/2026**

ಪಿರ್ಯಾದಿ: ರಾಜ್ಯದ ಪರವಾಗಿ
ಆನಂದಪುರ ಪೊಲೀಸ್ ಠಾಣೆ.

ವಿರುದ್ಧ

ಆರೋಪಿ: ಎ1) ನಾಗರಾಜ ಬಿನ್ ವೆಂಕಟೇಶಪ್ಪ
ವಯಸ್ಸು ಸುಮಾರು 48 ವರ್ಷ,
ವಾಸ: ಡ್ಯಾಮ ಹೊಸೂರು ಗ್ರಾಮ,
ಸಾಗರ ತಾಲ್ಲೂಕು, ಶಿವಮೊಗ್ಗ.

ಆರೋಪಣೆ

ಶ್ರೀ ರಾಘವೇಂದ್ರ ಶೆಟ್ಟಿಗಾರ್., ಬಿ.ಎ., ಎಲ್.ಎಲ್.ಎಮ್., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

ದಿನಾಂಕ: 06-04-2026 ರಂದು ಸಂಜೆ 07.30 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು , ಡ್ಯಾಂ ಹೊಸೂರು ಗ್ರಾಮದ, ಸಾರ್ವಜನಿಕ ಬಸ್ ನಿಲ್ದಾಣದ ಹತ್ತಿರ, ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ, ಸಾರ್ವಜನಿಕರಿಗೆ ಮದ್ಯವನ್ನು ಸೇವನೆ ಮಾಡಲು ಸ್ಥಳಾವಕಾಶ ಮಾಡಿಕೊಟ್ಟು, ಆ ಮೂಲಕ ಕರ್ನಾಟಕ ಅಬಕಾರಿ ಅಧಿನಿಯಮ, 1965 ರ ಕಲಂ 32(3), 15(ಎ) ರ ಅಡಿ ನನ್ನ ಸಂಜ್ಞೇಯತೆಯಲ್ಲಿ ಅಪರಾಧ ಎಸಗಿರುತ್ತೀರ.

ಈ ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ ೧. ಈಗ ಓದಿ ತಿಳಿಸಿ ಹೇಳಲಾದ ನಿಮ್ಮ ಮೇಲಿನ ಅಪಾದನೆ ತಿಳಿಯಿತೆ?

ಉತ್ತರ:

ಪ್ರಶ್ನೆ ೨. ಆರೋಪಣೆಯನ್ನು ಒಪ್ಪುವಿರೋ ಅಥವಾ ವಿಚಾರಣೆಯಾಗಲು ಬಯಸುವಿರೋ?

ಉತ್ತರಃ

**(**ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಹೇಳಿಕೆಯನ್ನು ದಾಖಲುಮಾಡಿಕೊಳ್ಳಲಾಯಿತು.**)**

ದಿನಾಂಕಃ **09** ನೇ ಜುಲೈ **2026** ರಂದುಃ

**(**ಶ್ರೀ ರಾಘವೇಂದ್ರ ಶೆಟ್ಟಿಗಾರ್**)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಂದಂನ್ಯಾದಂಡಾಧಿಕಾರಿಗಳು, ಸಾಗರ.